ಆ) 1995-96, 1996-97 ಹಾಗೂ 1997-98ನೇ ಸಾಲಿನ ಮನೆಗಳಿಗೆ ಸಂಬಂಧಿಸಿದಂತೆ ತೀರ್ಥಹಳ್ಳಿಯಲ್ಲಿ 235 ಮನೆಗಳು ಹೊಸನಗರದಲ್ಲಿ 57 ಮನೆಗಳು ಪೂರ್ಣಗೊಂಡಿವೆ. ಹಾಗೂ 727 ಮನೆಗಳು ಪ್ರಗತಿಯಲ್ಲಿವೆ. ಉಳಿದ 100 ಮನೆಗಳನ್ನು ಪ್ರಾರಂಭಿಸಬೇಕಾಗಿದೆ. 95-96ನೇ ಸಾಲಿನಿಂದ ಒಟ್ಟು 20.20 ಲಕ್ಷ ರೂ.ಗಳ ಸಾಲದ ಹಣ ಬಾಕಿ ಇರುತ್ತದೆ.

ಇ) ಸಾಲದ ಹಣ ಹುಡ್ಕೋ ಸಂಸ್ಥೆಯಿಂದ ಮಂಜೂರಾಗಿದ್ದು, ಸದರಿ ಹಣವನ್ನು ಹುಡ್ಕೋ ಸಂಸ್ಥೆಯು ಪ್ರಗತಿಯನ್ನು ಆಧರಿಸಿ ಹಣ ಬಿಡುಗಡೆ ಮಾಡುತ್ತದೆ.

ವಿಷಯ: ಶಿವಮೊಗ್ಗ ಜಿಲ್ಲೆಯ ತಾಲ್ಲೂಕುಗಳಿಗೆ ಹನಿ ನೀರಾವರಿಗೆ ಸಹಾಯ ಧನ

2580 (3559)

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯ ವಿವಿಧ ತಾಲ್ಲೂಕುಗಳಿಗೆ ಹನಿ ನೀರಾವರಿ(ಡ್ರಿಪ್ ಇರಿಗೇಷನ್)ಗಾಗಿ ನೀಡಿದ ಸಹಾಯಧನ ಎಷ್ಟೆಷ್ಟು? ಈ ಸಾಲಿನಲ್ಲಿ ಇನ್ನೂ ಸ್ಥಾಪಿಸಲು ಪ್ರತಿ ತಾಲ್ಲೂಕಿಗೆ ಎಷ್ಟು ಬಾಕಿ ಇದೆ?

ಆ) ಹನಿ ನೀರಾವರಿ ಉಪಕರಣಗಳನ್ನು ರೈತರಿಗೆ ಸಹಾಯಧನದಲ್ಲಿ ಒದಗಿಸುವ ಸಂಸ್ಥೆಗಳು ಕೇಂದ್ರ ಸರ್ಕಾರದಿಂದ ದರ ಒಪ್ಪಂದ ಮಾಡಿಕೊಂಡಿದ್ದರೂ ಈಗಾಗಲೇ ಸಹಾಯ ಧನ ಪಡೆದಿರುವ ಪ್ರಕರಣಗಳಲ್ಲಿ ರೈತರಿಂದ ಒಪ್ಪಂದದ ದರಕ್ಕಿಂತ ಹೆಚ್ಚು ಹಣ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಕಡಿಮೆ ದರ ಒಪ್ಪಂದ ಮಾಡಿಕೊಂಡಿದ್ದರೂ ಹೆಚ್ಚಿನ ಹಣವನ್ನು ಪಡೆದು ರೈತರು ಮತ್ತು ಸರ್ಕಾರವನ್ನು ವಂಚಿಸಿರುವ ಈ ಸಂಸ್ಥೆಗಳ ಮೇಲೆ ಸರ್ಕಾರ ಕೈಗೊಳ್ಳುವ ಕ್ರಮ ಏನು?

ಶ್ರೀ ಡಿ.ಟಿ.ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು):

1996-97 ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯ ವಿವಿಧ ತಾಲ್ಲೂಕುಗಳಿಗೆ ಹನಿ ನೀರಾವರಿ (ಡ್ರಿಪ್ ಇರಿಗೇಷನ್) ಗಾಗಿ ಸಹಾಯ ಧನ ವಿತರಿಸಿದ ವಿವರ ಮತ್ತು ಬಾಕಿ ಉಳಿದಿರುವ ಅರ್ಜಿಗಳಿಗೆ ಬೇಕಾದ ಸಹಾಯ ಧನದ ವಿವರ ಈ ಕೆಳಕಂಡಂತಿವೆ.

ತಾಲ್ಲೂಕು	ಸಹಾಯ ಧನ ವಿತರಿಸಿದ ಮೊತ್ತ (ರೂ)	ಬಾಕಿ ಇರುವ ಅರ್ಜಿಗಳಿಗೆ ಬೇಕಾದ ಮೊತ್ತ (ರೂ)
1) ಶಿವಮೊಗ್ಗ	15,39,938-00	40,50,000-00
2) ಭದ್ರಾವತಿ	17,22,470-00	4,50,000-00
3) ಚಿನ್ನಗಿರಿ	1,57,33,220-00	263,99,609-00
4) ಹೊನ್ನಾಳಿ	24,69,672-00	25,00.000-00
5) ಶಿಕಾರಿಪುರ	22,28,104-00	10,21,500-00
6) ಸೊರಬ	32,07,757-00	22,55,897-00
7) ಹೊಸನಗರ	3,29,765-00	72,00,000-00
8) ಸಾಗರ	23,29,109-00	40,00,000-00
9) ತೀರ್ಥಹಳ್ಳಿ	41,62,453-00	36,00,000-00

ಆ) ಇಲ್ಲ.

ಇ) ಅಂತಹ ಸಂಸ್ಥೆಗಳನ್ನು ಕಪ್ಪು ಪಟ್ಟಿಯಲ್ಲಿ ಸೇರಿಸಲಾಗುವುದು ಹಾಗೂ ಅನುಮೋದನೆಯನ್ನು ರದ್ದುಗೊಳಿಸಲಾಗುವುದು.

ವಿಷಯ: ಕೊಡಗಿನಲ್ಲಿ ಅತಿವೃಷ್ಟಿಯಿಂದಾದ ಹಾನಿ.

2581 (3073)

ಶ್ರೀ ಅಪ್ಪಚ್ಚು ರಂಜನ್ ಎಂ.ಪಿ (ಸೋಮವಾರಪೇಟೆ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗಿನಲ್ಲಿ ಈ ಸಾಲಿನಲ್ಲಿ ಅತಿವೃಷ್ಟಿಯಿಂದಾದ ನಷ್ಟದ ಅಂದಾಜು ಎಷ್ಟು?

ಆ) ಹಾಗಿದ್ದಲ್ಲಿ, ಪರಿಹಾರವಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ? (ತಾಲ್ಲೂಕುವಾರು ವಿವರಗಳನ್ನು ಕೊಡುವುದು)